# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿತ್ರದುರ್ಗ</u>

ಎಸ್.ಸಿ. ನಂ. 57/2022

ಸಿಡಬ್ಲ್ಯೂ: 28
ಪಿಡಬ್ಲ್ಯೂ: 04

**<u>ದಿನಾಂಕಃ 18-10-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

| | |
|---|---|
| ಸಾಕ್ಷಿದಾರರ ಹೆಸರು | ಃ ಶೃತಿ |
| ಗಂಡನ ಹೆಸರು | ಃ ಮಹೇಶ್ |
| ವಯಸ್ಸು | ಃ 27 ವರ್ಷ |
| ಉದ್ಯೋಗ | ಃ ಗ್ರಾಮೀಣ ಕೂಲಿ ಕಾರ್ಮಿಕರ ಸಂಘದ ಕೋಆರ್ಡಿನೇಟರ್ |
| ವಾಸ ಸ್ಥಳ | ಃ ಬೆಣ್ಣೆಹಳ್ಳಿ |

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ</u>**

ಅಸಾ**–1** ಕರಿಯಪ್ಪ ಗೊತ್ತು. ಸುಮ ಗೊತ್ತು. ವಿಸಿ ಮೂಲಕ ಕಾಣಿಸುತ್ತಿರುವ ಆರೋಪಿ ನಾರಪ್ಪ ಗೊತ್ತು. ಆತ ಸುಮಾಳ ಗಂಡ. ಅವರ ಮದುವೆ ಸಿರಿಗೆರೆಯಲ್ಲಿ ದಿನಾಂಕಃ **25–12–2015** ರಂದು ಸಾಮೂಹಿಕ ವಿವಾಹದಲ್ಲಿ ಆಗಿತ್ತು. ಮದುವೆಯಾದ ನಂತರ ಸುಮ ಕೋಣನೂರಿನಲ್ಲಿರುವ ಗಂಡನ ಮನೆಯಲ್ಲಿ ವಾಸವಿರುತ್ತಿದ್ದಳು. ಗಂಡ ಹೆಂಡತಿ ಇಬ್ಬರೇ ವಾಸ ಮಾಡುತ್ತಿದ್ದು, ಆ ನಂತರ ಒಂದು ಮಗು ಆಗಿದ್ದು ಮಗುವಿನ ಜೊತೆ ವಾಸವಿದ್ದರು.

**2.** **2021** ರಲ್ಲಿ ಗೌರಿ ಹಬ್ಬಕ್ಕೆ ಸುಮ ಬೆಣ್ಣೆಹಳ್ಳಿಗೆ ಬಂದಾಗ ನನಗೆ ಸಿಕ್ಕಿದ್ದಳು. **4** ವರ್ಷ ಗಂಡ ಚೆನ್ನಾಗಿ ನೋಡಿಕೊಂಡಿದ್ದಾಗಿ ಮತ್ತು ಇತ್ತೀಚೆಗೆ ಮದುವೆಯಲ್ಲಿ ಏನೂ ವರದಕ್ಷಿಣೆ ಕೊಟ್ಟಿರದೇ ಇದ್ದ ಕಾರಣ ಈಗ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಕಿರುಕುಳ ಕೊಡುತ್ತಿದ್ದಾನೆಂದು ಹೇಳುತ್ತಿದ್ದಳು. ಆರೋಪಿ ಕುಡಿಯುತ್ತಾನೆಂದು, ಜೂಜಾಟ ಆಡುತ್ತಾನೆ, ಒಸಿ ಆಡುತ್ತಾನೆಂದು, ದುಡಿದಿದ್ದನ್ನು ಮನೆಗೆ ಏನೂ ಕೊಡುವುದಿಲ್ಲ ಎಂದು, ಜೀವನಕ್ಕೆ ಕಷ್ಟವಾಗಿದ್ದರಿಂದ ಕೂಲಿ ಕೆಲಸಕ್ಕೆ ಹೋಗುತ್ತೇನೆ ಎಂದು, ಆರೋಪಿಯು ವರದಕ್ಷಿಣೆಗಾಗಿ ಹಿಂಸೆ

ಮಾಡುತ್ತಿದ್ದಾನೆಂದು ನನ್ನ ಮುಂದೆ ಹೇಳುತ್ತಿದ್ದಳು. ನಾನು ಮತ್ತು ದೋಸಾ–**27** ಗೀತಾ ಒಟ್ಟಿಗೆ ಇದ್ದಾಗ ಈ ಎಲ್ಲಾ ವಿಷಯವನ್ನು ಹೇಳಿದ್ದಳು. ನಾವು ಆಕೆಗೆ ಇನ್ನೊಂದು ಸಲ ಈ ರೀತಿ ಆರೋಪಿ ಹಿಂಸೆ ಮಾಡಿದಲ್ಲಿ ನಮಗೆ ತಿಳಿಸು ಎಂದು ಮತ್ತು ಆತನನ್ನು ಮಹಿಳಾ ಸಾಂತ್ವಾನ ಕೇಂದ್ರಕ್ಕೆ ಕರೆಸಿ ಬುದ್ದಿ ಹೇಳುತ್ತೇವೆಂದು ತಿಳಿಸಿ ಒಂದು ಪೋನ್ ನಂಬರನ್ನು ಆಕೆಗೆ ಕೊಟ್ಟಿದ್ದೆವು. ಆದರೆ ಸುಮ ನಮಗೆ ಯಾವುದೇ ಕರೆ ಮಾಡಲಿಲ್ಲ.

3. **2022** ರಲ್ಲಿ ದಿನಾಂಕಃ **6** ರಂದು ಸಂಜೆ ನನಗೆ ಸುಮಾಳನ್ನು ಆಕೆಯ ಗಂಡ ಕೊಲೆ ಮಾಡಿ ಮನೆಯಲ್ಲಿ ಮಂಚದ ಅಡಿಯಲ್ಲಿ ಕಡಪ ಕಲ್ಲುಗಳನ್ನು ತೆಗೆದು ಗುಂಡಿ ತೋಡಿ ಹೂತು ಹಾಕಿ, ಕಡಪಾ ಕಲ್ಲುಗಳನ್ನು ಪುನಃ ಇಟ್ಟು ಅದರ ಮೇಲೆ ಪುನಃ ಸಿಮೆಂಟನ್ನು ಹಾಕಿದ್ದಾನೆಂದು ವಿಷಯ ಗೊತ್ತಾಯಿತು.

4. ದಿನಾಂಕಃ **07** ರಂದು ನಾನು ಕೋಣನೂರಿಗೆ ಹೋಗಿದ್ದೆ. ಎ.ಸಿ, ಪಿಡಿಓ ಮತ್ತು ಪಂಚಾಯಿತಿ ಕ್ಲರ್ಕ್ ಹಾಗೂ ಪೊಲೀಸರು ಬಂದಿದ್ದರು. ಆರೋಪಿಯ ಮನೆಯಿಂದ ವಾಸನೆ ಬರುತ್ತಿತ್ತು. ಸುಮಾಳ ತಂದೆಗೆ ಮಂಚವನ್ನು ಎಳೆದು ಸರಿಸುವಂತೆಹೇಳಿದರು. ಆತ ಅದನ್ನು ಎಳೆದು ಸರಿಸಿದಾಗ ಕಡಪಾ ಕಲ್ಲಿನ ಮೇಲೆ ಹಾಕಿದ್ದ ಸಿಮೆಂಟ್ ಸೀಳಿದ್ದು ಕಂಡುಬಂದಿತ್ತು. ಸಿಮೆಂಟ್ ಹುಬ್ಬಿದಂತೆ ಕಂಡು ಬಂದಿತ್ತು. ಪೊಲೀಸರು  ದೂರು ಕೊಟ್ಟ ನಂತರ ಸ್ಥಳಕ್ಕೆ ಬಂದು ಶವವನ್ನು ಅಗೆದು ಹೊರ ತೆಗೆದರು. ಶವದ ಮುಖವೆಲ್ಲಾ ಕೊಳೆತು ಹೋಗಿತ್ತು. ಶವದ ಮೈಮೇಲಿನ ಬಟ್ಟೆಗಳನ್ನು ನೋಡಿ ಅದು ಆಕೆಯ ಶವ ಎಂದು ಗುರುತಿಸಿದೆವು. ಆರೋಪಿ ಯಾಕೆ ಆಕೆಯನ್ನು ಕೊಲೆ ಮಾಡಿದ್ದ ಎಂದು ನನಗೆ ಗೊತ್ತಿಲ್ಲ.

<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್.ಸಿ.ಆರ್. ವಕೀಲರಿಂದಃ</u>

ಈ ಹಂತದಲ್ಲಿ ಆರೋಪಿ ಪರ ವಕೀಲರು ಎಲ್ಲಾ ಪ್ರಮುಖ ಸಾಕ್ಷಿಗಳ ಮುಖ್ಯ ವಿಚಾರಣೆಯ ನಂತರ ಪಾಟೀ ಸವಾಲು ಮಾಡುವುದಾಗಿ ಇಲ್ಲದಿದ್ದರೆ ಆರೋಪಿಯ ರಕ್ಷಣೆಗೆ ತೊಂದರೆಯಾಗುವುದು ಎಂದು ಕಾಲಾವಕಾಶ

ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ
ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

(ಮನಗೂಳಿ ಪ್ರೇಮಾವತಿ ಎಂ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.